AHF/ 03 /AHP /2021-AHF_SEC_b_AH_ Animal Husbandry Fisheries sec

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2019-20ನೇ ಸಾಲಿಗೆ ಸಂಬಂಧಿಸಿದಂತೆ ಎನ್.ಎಲ್.ಎಂ. ಯೋಜನೆಯಡಿ ನವೀನ ಕುಕ್ಕುಟ ಉತ್ಪಾದನೆ ಯೋಜನೆ Innovative Project for Poultry Productivity (IPPP) ಅನುಷ್ಠಾನಗೊಳಿಸಲು ಬೆಳಗಾವಿ ಜಿಲ್ಲೆಗೆ (ಕಿತ್ತೂರು, ಹುಕ್ಕೇರಿ) ಸಂಬಂಧಿಸಿದಂತೆ ಫಲಾನುಭವಿಗಳ ಆಯ್ಕೆಗಾಗಿ ಸಮಿತಿ ರಚಿಸುವ ಕುರಿತು ಆದೇಶ.

**ಓದಲಾಗಿದೆ:** ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಏಕ ಕಡತ ಸಂಖ್ಯೆ: ಎನ್.ಎಲ್.ಎಂ. ಯೋಜನೆ 2019-20 ಬೆಳಗಾವಿ ಜಿಲ್ಲೆ (ಕಿತ್ತೂರು ಹುಕ್ಕೇರಿ) ಅನುಷ್ಠಾನ 2020-21, ದಿನಾಂಕ:11.12.2020.

*********

**ಪ್ರಸ್ತಾವನೆ:**

ಮೇಲೆ ಓದಲಾದ ಆಯುಕ್ತರ ಕಛೇರಿಯ ಏಕ ಕಡತದಲ್ಲಿ ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ ಬೆಂಗಳೂರು ವತಿಯಿಂದ ಎನ್.ಎಲ್.ಎಂ. ಯೋಜನೆಯಡಿ ನವೀನ ಕುಕ್ಕುಟ ಉತ್ಪಾದನೆ ಯೋಜನೆ Innovative Project for Poultry Productivity (IPPP) ಅನುಷ್ಠಾನಗೊಳಿಸಲು ಬೆಳಗಾವಿ ಜಿಲ್ಲೆಗೆ (ಕಿತ್ತೂರು, ಹುಕ್ಕೇರಿ) ಸಂಬಂಧಿಸಿದಂತೆ, 2019-20 ರಲ್ಲಿ ರೂ.225.00 ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು, ಬೆಳಗಾವಿ ವಿಭಾಗದ ಬೆಳಗಾವಿ ಜಿಲ್ಲೆಯ ಕಿತ್ತೂರು ಹಾಗೂ ಹುಕ್ಕೇರಿ ತಾಲ್ಲೂಕುಗಳಲ್ಲಿ ಪ್ರತಿ ತಾಲ್ಲೂಕಿನ 100 ಜನ ಫಲಾನುಭವಿಗಳಿಗೆ ಮಾಂಸದ ಕೋಳಿ ಮರಿ ಸಾಕಲು ಬೇಕಾಗುವ ಕೋಳಿ ಮನೆ, ಆಹಾರುಣಿಕೆ, ನೀರುಣಿಕೆ, ಆಹಾರ ಹಾಗೂ ಒಂದು ವರ್ಷದ ಅವಧಿಯಲ್ಲಿ 4 ಹಂತಗಳ ಪ್ರತಿ ಹಂತದಲ್ಲಿ ಪ್ರತಿ ಫಲಾನುಭವಿಗೆ 150 ಒಂದು ದಿನದ ಮಾಂಸದ ಕೋಳಿಮರಿಗಳನ್ನು ಮಾಂಸ ಉತ್ಪಾದನೆಗಾಗಿ ನೀಡಬೇಕಾಗಿರುತ್ತದೆ. ನಿಗದಿಯಾದ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನಲ್ಲಿ ಒಂದು ಕುಕ್ಕುಟ ಉತ್ಪಾದಕರ ಸಹಕಾರ ಸಂಘವಿರುತ್ತದೆ. ಆದರೆ, ಕಿತ್ತೂರಿನಲ್ಲಿ ಯಾವುದೇ ಕುಕ್ಕುಟ ಸಹಕಾರ ಸಂಘ ನೋಂದಣಿಯಾಗಿರುವುದಿಲ್ಲ. ಮಹಾಮಂಡಳದಲ್ಲಿ ಹಾಲಿಯಿರುವ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರ ಆಡಳಿತ ಮಂಡಳಿಯ ಅವಧಿಯು ಮುಗಿದಿರುವುದರಿಂದ, ಎನ್ .ಎಲ್.ಎಂ. ಯೋಜನೆಯಡಿ ಐ.ಪಿ.ಪಿ.ಪಿ ಯೋಜನೆಯ ಫಲಾನುಭವಿಗಳನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿ ರಚಿಸುವಂತೆ ಕೋರಿ ಆಯುಕ್ತರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅದರಂತೆ ಫಲಾನುಭವಿಗಳ ಆಯ್ಕೆ ಸಮಿತಿಯನ್ನು ರಚಿಸಲು ನಿರ್ಧರಿಸಿ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 03 ಪಪಾಯೋ 2021,**
**ಬೆಂಗಳೂರು, ದಿನಾಂಕ:06.02.2021**

ಪ್ರಸ್ತಾವನೆಯನ್ನು ಕೂಲಂಕಷಾಗಿ ಪರಿಶೀಲಿಸಿದ ಸರ್ಕಾರವು, ಎನ್.ಎಲ್.ಎಂ. ಯೋಜನೆಯಡಿ ಕುಕ್ಕುಟ ಉತ್ಪಾದನೆ ನವೀನ ಯೋಜನೆ- Innovative Project for Poultry Productivity (IPPP) ಅನುಷ್ಠಾನಗೊಳಿಸಲು ಫಲಾನುಭವಿಗಳನ್ನು ಆಯ್ಕೆ ಮಾಡಲು ಬೆಳಗಾವಿ ಜಿಲ್ಲೆಯ ಕಿತ್ತೂರು ಮತ್ತು ಹುಕ್ಕೇರಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಮಾತ್ರ ಈ ಕೆಳಕಂಡ ಆಯ್ಕೆ ಸಮಿತಿಯನ್ನು ರಚಿಸಿ ಸರ್ಕಾರವು ಆದೇಶಿಸಿರುತ್ತದೆ.

| ಕ್ರಸಂ | ಆಯ್ಕೆ ಸಮಿತಿ ಸದಸ್ಯರು | ಪದನಾಮ |
|---|---|---|
| 1. | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |

ಸ್ವೀಕೃತಿ ಸಂಖ್ಯೆ 1914
ದಿನಾಂಕ 15/2/2021
ಬೆಂಗಳೂರು

....2

Scanned with CamScanner

| | | |
|---|---|---|
| 2. | ಉಪನಿರ್ದೇಶಕರು, ತಾಲ್ಲೂಕು ಸಹಾಯಕ ನಿರ್ದೇಶಕರು | ಸದಸ್ಯರು |
| 3. | ಕರ್ನಾಟಕ ಕುಕ್ಕುಟ ಮಹಾಮಂಡಳ ನಿಯಮಿತದ ಪ್ರಾದೇಶಿಕ ಸಹಾಯಕ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎಸ್.ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)
06/02

**ಇವರಿಗೆ:**

1. ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ, ಹೆಬ್ಬಾಳ, ಬೆಂಗಳೂರು.
5. ಮಾನ್ಯ ಪಶುಸಂಗೋಪನೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
6. ಸಂಬಂಧಪಟ್ಟವರಿಗೆ ಆಯುಕ್ತರ ಮುಖಾಂತರ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned with CamScanner